**ಕರ್ನಾಟಕ ವಿಧಾನ ಪರಿಷತ್ತು**

# ಕ್ಲಬ್ ವಿಶೇಷ ಸದನ ಸಮಿತಿ

# ರಾಜ್ಯದಲ್ಲಿರುವ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಕ್ಲಬ್‌ಗಳ ಕಾರ್ಯವೈಖರಿ ಮತ್ತು ಚಟುವಟಿಕೆಗಳ ಬಗ್ಗೆ ಪರಿಶೀಲಿಸಿ ವರದಿ ಸಲ್ಲಿಸಲು ರಚಿಸಲಾದ ವಿಶೇಷ ಸದನ ಸಮಿತಿಯ ವರದಿ

**ಮಾನ್ಯ ಸಭಾಪತಿಯವರಿಗೆ ಸಲ್ಲಿಸಿದ ದಿನಾಂಕ:**
**ವಿಧಾನ ಪರಿಷತ್ತಿಗೆ ಮಂಡಿಸಿದ ದಿನಾಂಕ: 15.02.2024**

ಶಾಸನ ರಚನಾ ಶಾಖೆ
ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯ
ವಿಧಾನಸೌಧ, ಬೆಂಗಳೂರು.

# ವಿಷಯ ಸೂಚಿ


| ಕ್ರಮ ಸಂಖ್ಯೆ | ವಿವರ | ಪುಟಗಳು |
|---|---|---|
| 1. | ಸಮಿತಿಯ ರಚನೆ | i-ii |
| 2. | ಮುನ್ನುಡಿ | iii-iv |
| 3. | ವರದಿ | 1–16 |
| 4. | ಸಮಿತಿಯ ಶಿಫಾರಸ್ಸುಗಳು | 4–6 |
| 5. | ಅನುಬಂಧಗಳು | 17–22 |

# ಸಮಿತಿಯ ರಚನೆ

## 2020–2023

**ಎನ್. ರವಿಕುಮಾರ್**

**ಅಧ್ಯಕ್ಷರು**

***ಸದಸ್ಯರು***

**ಶ್ರೀಯುತರುಗಳಾದ:–**

| | | |
|---|---|---|
| 01. ಬಸವರಾಜ ಶಿವಲಿಂಗಪ್ಪ ಹೊರಟ್ಟಿ | : | ವಿಧಾನ ಪರಿಷತ್ತಿನ ಸದಸ್ಯರು (ದಿನಾಂಕ: 20.06.2020 ರಿಂದ 08.02.2021ರವರೆಗೆ) |
| 02. ಕೆ.ಸಿ. ಕೊಂಡಯ್ಯ | : | ವಿಧಾನ ಪರಿಷತ್ತಿನ ಸದಸ್ಯರು (ದಿನಾಂಕ: 20.06.2020 ರಿಂದ 04.01.2022ರವರೆಗೆ) |
| 03. ಡಾ: ತೇಜಸ್ವಿನಿಗೌಡ | : | ವಿಧಾನ ಪರಿಷತ್ತಿನ ಸದಸ್ಯರು (ದಿನಾಂಕ: 20.06.2020 ರಿಂದ) |
| 04. ಡಾ: ವೈ.ಎ. ನಾರಾಯಣಸ್ವಾಮಿ | : | ವಿಧಾನ ಪರಿಷತ್ತಿನ ಸದಸ್ಯರು (ದಿನಾಂಕ: 20.06.2020 ರಿಂದ 20.01.2021ರವರೆಗೆ) |
| 05. ಪ್ರಕಾಶ್ ಕೆ. ರಾಥೋಡ್ | : | ವಿಧಾನ ಪರಿಷತ್ತಿನ ಸದಸ್ಯರು (ದಿನಾಂಕ: 20.06.2020 ರಿಂದ 27.01.2022ರವರೆಗೆ) |
| 06. ಡಾ: ಕೆ. ಗೋವಿಂದರಾಜು | : | ವಿಧಾನ ಪರಿಷತ್ತಿನ ಸದಸ್ಯರು (ದಿನಾಂಕ: 20.06.2020 ರಿಂದ) |
| 07. ಎಸ್.ಎಲ್. ಭೋಜೇಗೌಡ | : | ವಿಧಾನ ಪರಿಷತ್ತಿನ ಸದಸ್ಯರು (ದಿನಾಂಕ: 20.06.2020 ರಿಂದ) |
| 08. ಯು.ಬಿ. ವೆಂಕಟೇಶ್ | : | ವಿಧಾನ ಪರಿಷತ್ತಿನ ಸದಸ್ಯರು (ದಿನಾಂಕ: 20.06.2020 ರಿಂದ) |
| 09. ಕೆ.ವಿ. ನಾರಾಯಣಸ್ವಾಮಿ | : | ವಿಧಾನ ಪರಿಷತ್ತಿನ ಸದಸ್ಯರು (ದಿನಾಂಕ: 22.02.2021ರಿಂದ 14.06.2022ರವರೆಗೆ) |
| 10. ಕೆ.ಪಿ. ನಂಜುಂಡಿ ವಿಶ್ವಕರ್ಮ | : | ವಿಧಾನ ಪರಿಷತ್ತಿನ ಸದಸ್ಯರು (ದಿನಾಂಕ: 22.02.2021ರಿಂದ) |
| 11. ದಿನೇಶ್ ಗೂಳಿಗೌಡ | : | ವಿಧಾನ ಪರಿಷತ್ತಿನ ಸದಸ್ಯರು (ದಿನಾಂಕ: 13.01.2022 ರಿಂದ) |
| 12. ಮರಿತಿಬ್ಬೇಗೌಡ | : | ವಿಧಾನ ಪರಿಷತ್ತಿನ ಸದಸ್ಯರು (ದಿನಾಂಕ: 01.04.2022 ರಿಂದ) |

### ಉಪ ಸಮಿತಿ ರಚನೆ

**ಡಾ: ಕೆ. ಗೋವಿಂದರಾಜು**

**ಅಧ್ಯಕ್ಷರು**

**ಸದಸ್ಯರು**

**ಶ್ರೀಯುತರುಗಳಾದ:–**

| | | |
|---|---|---|
| 01. ಡಾ: ತೇಜಸ್ವಿನಿಗೌಡ | : | ವಿಧಾನ ಪರಿಷತ್ತಿನ ಸದಸ್ಯರು |
| 02. ಪ್ರಕಾಶ್ ಕೆ. ರಾಥೋಡ್ | : | ವಿಧಾನ ಪರಿಷತ್ತಿನ ಸದಸ್ಯರು (ದಿನಾಂಕ:27.01.2022ರವರೆಗೆ) |

# ಕರ್ನಾಟಕ ವಿಧಾನ ಪರಿಷತ್ತಿನ ಅಧಿಕಾರಿಗಳು

**ಶ್ರೀಯುತರುಗಳಾದ:**

| | | |
|---|---|---|
| 1. ಕೆ.ಆರ್. ಮಹಾಲಕ್ಷ್ಮಿ | : | ಕಾರ್ಯದರ್ಶಿ |
| 2. ಎಸ್. ನಿರ್ಮಲ | : | ಅಪರ ಕಾರ್ಯದರ್ಶಿ |
| 3. ಬಿ.ಎ. ಬಸವರಾಜು | : | ಉಪ ಕಾರ್ಯದರ್ಶಿ |
| 4. ಕೆ.ರೇಖಾ | : | ಅಧೀನ ಕಾರ್ಯದರ್ಶಿ |

# ಮುನ್ನುಡಿ

ವಿಧಾನ ಪರಿಷತ್ತಿನ 140ನೇ ಅಧಿವೇಶನದಲ್ಲಿ ದಿನಾಂಕ:11.03.2020ರಂದು ಮಾನ್ಯ ಶಾಸಕರಾದ ಶ್ರೀ ಹೆಚ್.ಎಂ.ರೇವಣ್ಣ ಅವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:100(812)ರಲ್ಲಿ ಸರ್ಕಾರದಿಂದ ನಿವೇಶನವನ್ನು ಪಡೆದಿರುವ ರಿಕ್ರಿಯೇಷನ್ ಕ್ಲಬ್‌ಗಳು ಹಾಗೂ ಎಷ್ಟು ವರ್ಷಕ್ಕೆ ಗುತ್ತಿಗೆಯನ್ನು ನೀಡಲಾಗಿದೆ ಅಲ್ಲದೆ, ಕ್ಲಬ್‌ಗಳಲ್ಲಿ ಸದಸ್ಯತ್ವವನ್ನು ಹೊಂದಲು ನಿಗದಿಪಡಿಸಿರುವ ಅರ್ಹತೆ ಹಾಗೂ ವಸ್ತ್ರ ಸಂಹಿತೆ ಜಾರಿ ಮಾಡಿರುವ ಕುರಿತ ವಿಷಯವಾಗಿದ್ದು ಮಾನ್ಯ ಸಹಕಾರ ಸಚಿವರು ಸ್ಪಷ್ಟೀಕರಣ ನೀಡುವ ಸಂದರ್ಭದಲ್ಲಿ ಬೆಂಗಳೂರಿನಲ್ಲಿ ಎಲ್ಲಾ ರಿಕ್ರಿಯೇಷನ್ ಕ್ಲಬ್‌ಗಳು ನಿಯಮ ಬಾಹಿರವಾಗಿ ಕಾರ್ಯನಿರ್ವಹಿಸುತ್ತಿದ್ದು, ಈ ಬಗ್ಗೆ ಸಮಗ್ರವಾಗಿ ಪರಿಶೀಲಿಸಲು ಸದನ ಸಮಿತಿ ರಚಿಸುವುದಾಗಿ ತಿಳಿಸಿದ ಮೇರೆಗೆ ಮಾನ್ಯ ಸಭಾಪತಿಯವರು ರಾಜ್ಯದಲ್ಲಿರುವ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಕ್ಲಬ್‌ಗಳ ಕಾರ್ಯವೈಖರಿ ಮತ್ತು ಚಟುವಟಿಕೆಗಳನ್ನು ಪರಿಶೀಲಿಸಿ ವರದಿ ಸಲ್ಲಿಸಲು ವಿಧಾನ ಪರಿಷತ್ತಿನ ಮಾನ್ಯ ಶಾಸಕರಾದ ಶ್ರೀ ಎನ್. ರವಿಕುಮಾರ್ ಅವರ ಅಧ್ಯಕ್ಷತೆಯಲ್ಲಿ 08 ಜನ ಸದಸ್ಯರುಗಳನ್ನು ಒಳಗೊಂಡಂತೆ ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 242(ಎ) ರೀತ್ಯಾ ಒಂದು ವಿಶೇಷ ಸದನ ಸಮಿತಿಯನ್ನು ದಿನಾಂಕ:20.06.2020ರಂದು ರಚಿಸಿ ಮೂರು ತಿಂಗಳೊಳಗೆ ವರದಿಯನ್ನು ಸಲ್ಲಿಸಲು ಕಾಲಾವಕಾಶವನ್ನು ನೀಡಲಾಗಿರುತ್ತದೆ.

ಅದರಂತೆ, ದಿನಾಂಕ:07.08.2020 ರಂದು ವಿಶೇಷ ಸದನ ಸಮಿತಿಯು ತನ್ನ ಪ್ರಾರಂಭಿಕ ಸಭೆಯನ್ನು ನಡೆಸಿ ದಿನಾಂಕ:25.08.2020 ರಿಂದ 27.12.2023 ರವರೆಗೆ ಸುಮಾರು 39 ಬಾರಿ ಸಭೆ ಸೇರಿ ಸಹಕಾರ, ಆರ್ಥಿಕ, ತೋಟಗಾರಿಕೆ, ಕಂದಾಯ, ಪ್ರವಾಸೋದ್ಯಮ, ಲೋಕೋಪಯೋಗಿ, ನಗರಾಭಿವೃದ್ಧಿ, ಕಾನೂನು, ಒಳಾಡಳಿತ ಮತ್ತು ಅಬಕಾರಿ ಇಲಾಖೆಗಳ ಇಲಾಖಾಧಿಕಾರಿಗಳೊಂದಿಗೆ ವಿಸ್ತೃತವಾದ ಚರ್ಚೆಯನ್ನು ನಡೆಸಿರುತ್ತದೆ.

ವಿಶೇಷ ಸದನ ಸಮಿತಿಗೆ ವರದಿಯನ್ನು ಸಲ್ಲಿಸಲು ದಿನಾಂಕ: 20.06.2020 ರಿಂದ ಮೂರು ತಿಂಗಳುಗಳ ಕಾಲಾವಕಾಶವನ್ನು ನೀಡಲಾಗಿತ್ತು. ತದನಂತರ ದಿನಾಂಕ:21.09.2020ರಿಂದ 20.03.2021 ರವರೆಗೆ, ದಿನಾಂಕ:21.03.2021ರಿಂದ 20.09.2021ರವರೆಗೆ, ದಿನಾಂಕ:21.09.2021ರಿಂದ 20.03.2022 ರವರೆಗೆ, ದಿನಾಂಕ:21.03.2022ರಿಂದ 20.09.2022ರವರೆಗೆ, ದಿನಾಂಕ:21.09.2022 ರಿಂದ 20.03.2023ರವರೆಗೆ ದಿನಾಂಕ: 21.03.2023 ರಿಂದ 20.09.2023ರವರೆಗೆ ಹಾಗೂ ದಿನಾಂಕ:21.09.2023ರಿಂದ ಆರು ತಿಂಗಳ ಕಾಲಾವಕಾಶವನ್ನು ವಿಸ್ತರಿಸುವ ಪ್ರಸ್ತಾವನೆಗೆ ಸದನವು ಅನುಮೋದನೆಯನ್ನು ನೀಡಿರುತ್ತದೆ.

ವಿಧಾನ ಸಭೆಯಲ್ಲಿ ಮಾನ್ಯ ಸದಸ್ಯರಾದ ಶ್ರೀ ಎನ್.ಎ. ಹ್ಯಾರಿಸ್ ಅವರ ಅಧ್ಯಕ್ಷತೆಯಲ್ಲಿ ರಚಿಸಲಾಗಿದ್ದ ಸಮಿತಿಯು ಮಾಡಿರುವ ಶಿಫಾರಸ್ಸುಗಳನ್ನು ಆಧರಿಸಿ ಉಭಯ ಸದನಗಳಲ್ಲಿ ವಿಧೇಯಕ ಮಂಡನೆಗೆ ಸಂಬಂಧಪಟ್ಟಂತೆ ಕಾರ್ಯನಿರ್ವಹಿಸಲು ವಿಧಾನ ಪರಿಷತ್ತಿನ ಮಾನ್ಯ ಶಾಸಕರಾದ ಡಾ: ಕೆ. ಗೋವಿಂದರಾಜು ಅವರ ಅಧ್ಯಕ್ಷತೆಯಲ್ಲಿ ಮಾನ್ಯ ಶಾಸಕರುಗಳಾದ ಡಾ: ತೇಜಸ್ವಿನಿಗೌಡ ಮತ್ತು ಶ್ರೀ ಪ್ರಕಾಶ್ ಕೆ.ರಾಥೋಡರವರನ್ನು ಸದಸ್ಯರನ್ನಾಗಿ ನೇಮಿಸಿ ದಿನಾಂಕ:19.02.2021ರಂದು ಉಪ ಸಮಿತಿಯನ್ನು ರಚಿಸಲಾಗಿರುತ್ತದೆ.

ಅದರಂತೆ, ಉಪ ಸಮಿತಿಯು ದಿನಾಂಕ:17.04.2021, 19.07.2021 ಮತ್ತು 12.10.2021ರಂದು ನಗರಾಭಿವೃದ್ಧಿ ಇಲಾಖೆ, ಕಂದಾಯ ಇಲಾಖೆ, ಸಹಕಾರ ಇಲಾಖೆ, ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳೊಂದಿಗೆ ಸಭೆ ನಡೆಸಿರುತ್ತದೆ. ಉಪ ಸಮಿತಿಯು ಎಲ್ಲಾ ಆಯಾಮಗಳಲ್ಲಿ ಕೂಲಂಕಷವಾಗಿ ಪರಿಶೀಲಿಸಿ ಅಧ್ಯಯನ ನಡೆಸಿ ಒಟ್ಟಾರೆಯಾಗಿ ತೀರ್ಮಾನಿಸಿದಂತೆ ರಾಜ್ಯದಲ್ಲಿರುವ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಬರುವ ಕ್ಲಬ್‌ಗಳ ಕಾರ್ಯವೈಖರಿ ಮತ್ತು ಚಟುವಟಿಕೆಗಳನ್ನು ಕಾನೂನು ಬದ್ದವಾಗಿ ನಿಯಂತ್ರಿಸಲು THE KARNATAKA SOCIETIES REGISTRATION (AMENDMENT)

BILL, 2024ಕ್ಕೆ ಸಂಬಂಧಿಸಿದಂತೆ ಕರಡನ್ನು ತಯಾರಿಸಿ ಉಪ ಸಮಿತಿಯು ತನ್ನ ವರದಿಯನ್ನು ದಿನಾಂಕ:18.05.2023ರಂದು ಸಲ್ಲಿಸಿರುತ್ತದೆ.

ದಿನಾಂಕ:27.12.2023 ರಂದು ನಡೆದ ಸಮಿತಿ ಸಭೆಯಲ್ಲಿ ಕರಡು ವರದಿಯನ್ನು ಸಮಗ್ರವಾಗಿ ಸಮಿತಿಯು ಪರಿಶೀಲಿಸಿ, ಅಂಗೀಕರಿಸಿ, ಅನುಮೋದಿಸಲಾಗಿರುತ್ತದೆ.

ಸಮಿತಿಯ ಕಾರ್ಯಕಲಾಪಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ ವರದಿಯನ್ನು ತಯಾರಿಸುವಲ್ಲಿ ಸಹಕರಿಸಿದ ಮಾನ್ಯ ಶಾಸಕರುಗಳಿಗೆ ಹಾಗೂ ವಿಧಾನ ಪರಿಷತ್ತಿನ ಸಚಿವಾಲಯದ ಅಧಿಕಾರಿ, ಸಿಬ್ಬಂದಿ ವರ್ಗದವರಿಗೂ ಧನ್ಯವಾದಗಳನ್ನು ಅರ್ಪಿಸುತ್ತೇನೆ.

**ಎನ್. ರವಿಕುಮಾರ್**

ಅಧ್ಯಕ್ಷರು,
ರಾಜ್ಯದಲ್ಲಿರುವ ಹಾಗೂ ಬೃಹತ್ ಬೆಂಗಳೂರು
ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಬರುವ ಕ್ಲಬ್‌ಗಳ
ಕಾರ್ಯವೈಖರಿ ಮತ್ತು ಚಟುವಟಿಕೆಗಳನ್ನು
ಪರಿಶೀಲಿಸಲು ರಚಿಸಲಾಗಿರುವ ವಿಶೇಷ ಸದನ ಸಮಿತಿ.

ದಿನಾಂಕ:27.12.2023
ಸ್ಥಳ: ಬೆಂಗಳೂರು

# ವರದಿ

ವಿಧಾನ ಪರಿಷತ್ತಿನ 140ನೇ ಅಧಿವೇಶನದಲ್ಲಿ ದಿನಾಂಕ:11.03.2020ರಂದು ಮಾನ್ಯ ಶಾಸಕರಾದ ಶ್ರೀ ಹೆಚ್.ಎಂ. ರೇವಣ್ಣ ಅವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:100(812)ರಲ್ಲಿ ಸರ್ಕಾರದಿಂದ ನಿವೇಶನವನ್ನು ಪಡೆದಿರುವ ರಿಕ್ರಿಯೇಷನ್ ಕ್ಲಬ್‌ಗಳು ಹಾಗೂ ಎಷ್ಟು ವರ್ಷಕ್ಕೆ ಗುತ್ತಿಗೆಯನ್ನು ನೀಡಲಾಗಿದೆ ಅಲ್ಲದೆ, ಕ್ಲಬ್‌ಗಳಲ್ಲಿ ಸದಸ್ಯತ್ವವನ್ನು ಹೊಂದಲು ನಿಗದಿಪಡಿಸಿರುವ ಅರ್ಹತೆ ಹಾಗೂ ವಸ್ತ್ರ ಸಂಹಿತೆ ಜಾರಿ ಮಾಡಿರುವ ಕುರಿತ ವಿಷಯವಾಗಿದ್ದು ಮಾನ್ಯ ಸಹಕಾರ ಸಚಿವರು ಸ್ಪಷ್ಟೀಕರಣ ನೀಡುವ ಸಂದರ್ಭದಲ್ಲಿ ಬೆಂಗಳೂರಿನಲ್ಲಿ ಎಲ್ಲಾ ರಿಕ್ರಿಯೇಷನ್ ಕ್ಲಬ್‌ಗಳು ನಿಯಮ ಬಾಹಿರವಾಗಿ ಕಾರ್ಯನಿರ್ವಹಿಸುತ್ತಿದ್ದು, ಈ ಬಗ್ಗೆ ಸಮಗ್ರವಾಗಿ ಪರಿಶೀಲಿಸಲು ಸದನ ಸಮಿತಿ ರಚಿಸುವುದಾಗಿ ತಿಳಿಸಿದ ಮೇರೆಗೆ ಮಾನ್ಯ ಸಭಾಪತಿಯವರು ರಾಜ್ಯದಲ್ಲಿರುವ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಕ್ಲಬ್‌ಗಳ ಕಾರ್ಯವೈಖರಿ ಮತ್ತು ಚಟುವಟಿಕೆಗಳನ್ನು ಪರಿಶೀಲಿಸಿ ವರದಿ ಸಲ್ಲಿಸಲು ವಿಧಾನ ಪರಿಷತ್ತಿನ ಮಾನ್ಯ ಶಾಸಕರಾದ ಶ್ರೀ ಎನ್. ರವಿಕುಮಾರ್ ಅವರ ಅಧ್ಯಕ್ಷತೆಯಲ್ಲಿ ಒಂದು ವಿಶೇಷ ಸದನ ಸಮಿತಿಯನ್ನು ದಿನಾಂಕ:20.06.2020ರಂದು ರಚಿಸಲಾಗಿರುತ್ತದೆ. **(ಅನುಬಂಧ–1)**

**ಸಮಿತಿಯ ಪರಿಶೀಲನಾಂಶಗಳು**

01. ಮನರಂಜನಾ ಕ್ಲಬ್‌ಗಳಿಗೆ ಬಿ.ಡಿ.ಎ/ಬಿ.ಬಿ.ಎಂ.ಪಿ/ಕೆ.ಹೆಚ್.ಬಿ ಅಥವಾ ಇತರೆ ಸರ್ಕಾರಿ ಸಂಸ್ಥೆಗಳಿಂದ ನಿವೇಶನವನ್ನು ಲೀಸ್‌ನ ಆಧಾರದಲ್ಲಿ ನೀಡುತ್ತಿದ್ದು ಲೀಸ್‌ನ ಕರಾರಿನನ್ವಯ ಕಾರ್ಯನಿರ್ವಹಿಸುತ್ತಿರುವ ಕುರಿತು ಹಾಗೂ ಲೀಸ್‌ಗೆ ನೀಡಿರುವ ಮೊತ್ತದ ಬಗ್ಗೆ ಪರಿಶೀಲಿಸುವ ಕುರಿತು.

02. ಮನರಂಜನಾ ಕ್ಲಬ್‌ಗಳು ಕಾರ್ಯನಿರ್ವಹಿಸಲು ಅಬಕಾರಿ, ವಿದ್ಯುತ್ ಹಾಗೂ ಇತರೆ ಪರವಾನಗಿಗಳನ್ನು ಪಡೆಯುತ್ತಿದ್ದು, ಪರವಾನಗಿ ಕರಾರಿನನ್ವಯ ಕಾರ್ಯನಿರ್ವಹಿಸುತ್ತಿರುವುದನ್ನು ಪರಿಶೀಲಿಸುವ ಕುರಿತು.

03. ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ 1960ರ ರೀತ್ಯಾ ಪ್ರತಿ ವರ್ಷ ವಾರ್ಷಿಕ ಮಹಾಸಭೆ ನಡವಳಿ ಹಾಗೂ ಆಸ್ತಿ–ಜವಾಬ್ದಾರಿ ತ:ಖ್ತೆಗಳನ್ನು ಸಲ್ಲಿಸುವುದು ಕಡ್ಡಾಯವಾಗಿದ್ದು, ಇದನ್ನು ಪಾಲಿಸಿರುವ ಬಗ್ಗೆ ಪರಿಶೀಲಿಸುವುದು.

04. ಸದಸ್ಯತ್ವ ಶುಲ್ಕದ ಬಗ್ಗೆ ಪರಿಶೀಲನೆ.

05. ರಾಜ್ಯದ ಯಾವುದೇ ಕ್ಲಬ್‌ಗಳು ನಮ್ಮ ಸಂಸ್ಕೃತಿ ಮತ್ತು ಪರಂಪರೆಯ ಸಾಂಪ್ರದಾಯಿಕ ವಸ್ತ್ರಗಳನ್ನು ನಿಷೇಧಿಸದೆ ಸಾಮಾನ್ಯ ನಾಗರೀಕ ಮರ್ಯಾದತ್ತವಾಗಿ ತೊಡುವ ಉಡುಗೆ ಧರಿಸಿ ಕ್ಲಬ್‌ಗಳಿಗೆ ಪ್ರವೇಶಿಸುವ ಅವಕಾಶ ಹೊಂದಿರುವಂತಹ ನಿಯಮಗಳನ್ನು ಅಳವಡಿಸಿಕೊಳ್ಳುವಂತೆ ಎಲ್ಲಾ ಕ್ಲಬ್‌ಗಳಿಗೆ ಕಟ್ಟುನಿಟ್ಟಿನ ಸೂಚನೆಯನ್ನು ನೀಡಬೇಕೆಂಬುದನ್ನು ವಿಧೇಯಕದಲ್ಲಿ ಅಳವಡಿಸಿಕೊಳ್ಳುವ ಕುರಿತು.

06. ಸದಸ್ಯತ್ವ ಶುಲ್ಕ ನಿಗಧಿಪಡಿಸುವುದಕ್ಕೆ ಸಂಬಂಧಿಸಿದಂತೆ ಲಾಭದ ಉದ್ದೇಶವಿರದ ಎಲ್ಲಾ ಕ್ಲಬ್‌ಗಳಿಗೆ ಸರ್ಕಾರವು ಸೂಕ್ತ ಮಾನದಂಡ ಅಳವಡಿಸಬೇಕೆಂದು ಮತ್ತು ಸಕ್ಷಮ ಪ್ರಾಧಿಕಾರಿಯು ಪ್ರತಿಯೊಂದು ಕ್ಲಬ್‌ನ ಸದಸ್ಯತ್ವ ಶುಲ್ಕವನ್ನು ನಿಗದಿಪಡಿಸುವ ಬಗ್ಗೆ ಪರಿಶೀಲಿಸುವುದು.

07. ಸರ್ಕಾರದಿಂದ ವಿನಾಯ್ತಿ ದರದಲ್ಲಿ ಜಮೀನು ಅಥವಾ ಇತರೆ ಸವಲತ್ತು ಪಡೆದಿರುವ ಕ್ಲಬ್‌ಗಳಲ್ಲಿ ಆಯಾಯ ಕ್ಷೇತ್ರವಾರು ಜನಪ್ರತಿನಿಧಿಗಳು (ಎಂ.ಪಿ., ಎಂ.ಎಲ್.ಎ., ಹಾಗೂ ಎಂ.ಎಲ್.ಸಿ.,) ಸದಸ್ಯರಾಗ ಬಯಸಿದಲ್ಲಿ ಅಂತಹ ಜನಪ್ರತಿನಿಧಿಗಳಿಗೆ ಸದಸ್ಯತ್ವವನ್ನು (Membership) ಅವರುಗಳು ಬಯಸುವ ಎರಡು ಕ್ಲಬ್‌ಗಳಲ್ಲಿ ಮಾತ್ರ ನೀಡುವ ಕುರಿತು ಪರಿಶೀಲಿಸುವುದು.

08. ಕ್ರೀಡಾ ರಂಗದಲ್ಲಿ ಮಹೋನ್ನತ ಸಾಧನೆ ಮಾಡಿ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಪ್ರತಿಷ್ಠಿತ ಪ್ರಶಸ್ತಿಗಳನ್ನು ಪಡೆದ ಕ್ರೀಡಾಪಟುಗಳಿಗೆ ಹಾಗೂ ಶೌರ್ಯ ಪ್ರಶಸ್ತಿಯನ್ನು ಪಡೆದ ಮಾಜಿ ಸೈನಿಕರಿಗೆ ಆಯಾ ಪ್ರದೇಶಗಳಲ್ಲಿರುವ ಅವರು ಬಯಸಿದ ಸರ್ಕಾರದಿಂದ ವಿನಾಯ್ತಿ ದರದಲ್ಲಿ ಜಮೀನು ಅಥವಾ ಇತರೆ ಸವಲತ್ತು ಪಡೆದಿರುವ ಯಾವುದಾದರೂ ಒಂದು ಕ್ಲಬ್‌ನ ಸದಸ್ಯತ್ವ ನೀಡುವ ಬಗ್ಗೆ ಪರಿಶೀಲಿಸುವುದು.

09. ವಿಧಾನ ಸಭೆಯ ಹಾಲಿ ಮತ್ತು ಮಾಜಿ ಸದಸ್ಯರುಗಳ ಉಪಯೋಗಕ್ಕಾಗಿ ಸ್ಥಾಪಿಸಲಾಗಿರುವ ಸಾಂವಿಧಾನಿಕ ಕ್ಲಬ್ (Constitutional Club) ಜರೂರಾಗಿ ಕಾರ್ಯನಿರ್ವಹಿಸುವುದಕ್ಕಾಗಿ ಸ್ಥಳಾವಕಾಶವು ಸೇರಿದಂತೆ ಎಲ್ಲಾ ಅಗತ್ಯ ಕ್ರಮಗಳನ್ನು ತುರ್ತಾಗಿ ಒದಗಿಸಿ, ಪ್ರಸ್ತುತ ವರ್ಷದಿಂದಲೇ ಅದು ಕಾರ್ಯಾರಂಭ ಮಾಡಲು ಕ್ರಮ ಕೈಗೊಳ್ಳುವ ಬಗ್ಗೆ ಪರಿಶೀಲಿಸುವುದು.

10. ಕರ್ನಾಟಕ ಸಾಂವಿಧಾನಿಕ ಕ್ಲಬ್ (Constitutional Club of Karnataka) ಅನ್ನು ಸ್ಥಾಪಿಸಿದ ನಂತರ ಭಾರತ ಸಾಂವಿಧಾನಿಕ ಕ್ಲಬ್ (Constitutional Club of India)ನೊಂದಿಗೆ ಒಡಂಬಡಿಕೆ ಮಾಡಿಕೊಳ್ಳುವ ಬಗ್ಗೆ ಪರಿಶೀಲಿಸುವುದು.

11. ರಾಜ್ಯದಲ್ಲಿರುವ ಎಲ್ಲಾ ಕ್ಲಬ್‌ಗಳು ಕಡ್ಡಾಯವಾಗಿ ಮೂಲಭೂತ ಸೌಲಭ್ಯಗಳನ್ನು ಹೊಂದಿರಬೇಕೆಂದು ಹಾಗೂ ಇನ್ನು ಮುಂದೆ ಕ್ಲಬ್‌ಗಳು ಅಗತ್ಯ ಮೂಲಭೂತ ಸೌಲಭ್ಯಗಳನ್ನು ಹೊಂದಿದ್ದರೆ ಮಾತ್ರ ಪರವಾನಗಿ ನೀಡಲು ಅಥವಾ ನವೀಕರಿಸಲು ಕ್ರಮಕೈಗೊಳ್ಳುವ ಬಗ್ಗೆ ಪರಿಶೀಲಿಸುವುದು.

12. ಹೊಸ ಬಡಾವಣೆ ನಿರ್ಮಾಣ ಮಾಡಲು ಅನುಮತಿ ನೀಡುವ ಸಂದರ್ಭದಲ್ಲಿಯೇ ಆ ಬಡಾವಣೆಯಲ್ಲಿ ಕ್ಲಬ್ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಗೆ ಅನುಕೂಲವಾಗುವಂತೆ ಸ್ಥಳ ನಿಗಧಿಪಡಿಸುವ ಬಗ್ಗೆ ಪರಿಶೀಲಿಸುವುದು.

13. 25 ಎಕರೆಗಿಂತ ಮೇಲ್ಪಟ್ಟ ಜಮೀನಿನಲ್ಲಿ ಮುಂದೆ ರಚಿಸಲಾಗುವ ಬಡಾವಣೆಗಳಲ್ಲಿ ಆ ಬಡಾವಣೆಯ ನಿವಾಸಿಗಳಿಗೆ ಅನುಕೂಲವಾಗುವಂತೆ ಕ್ಲಬ್‌ನ್ನು ಸ್ಥಾಪಿಸಲು ಸ್ಥಳಾವಕಾಶವನ್ನು ಮೀಸಲಿಡುವಂತೆ Karnataka Town and Country Planning Actನ್ನು ತಿದ್ದುಪಡಿ ಮಾಡುವ ಕುರಿತು ಪರಿಶೀಲಿಸುವುದು.

14. ಪ್ರತಿಯೊಂದು ತಾಲ್ಲೂಕಿನಲ್ಲೂ ಕ್ಲಬ್ ನಿರ್ಮಿಸಲು ಸರ್ಕಾರದ ವತಿಯಿಂದ ಜಾಗ ನೀಡುವ ಕುರಿತು ಪರಿಶೀಲಿಸುವುದು.

15. ಸಮಿತಿಯು ಅಧ್ಯಯನ ನಡೆಸಿ ಒಟ್ಟಾರೆಯಾಗಿ ತೀರ್ಮಾನಿಸಿದಂತೆ ರಾಜ್ಯದಲ್ಲಿನ ಕ್ಲಬ್‌ಗಳ ಕಾರ್ಯವೈಖರಿ ಮತ್ತು ಚಟುವಟಿಕೆಗಳನ್ನು ಕಾನೂನು ಬದ್ಧವಾಗಿ ನಿಯಂತ್ರಿಸಲು (The Karnataka Regulation of Entry to public places and Regulation of Clubs Bill, 2023) ವಿಧೇಯಕವನ್ನು ಮಂಡಿಸಿ ಸೂಕ್ತ ಕಾನೂನು ಜಾರಿಗೆ ತರುವ ಬಗ್ಗೆ ಪರಿಶೀಲಿಸುವುದು.

16. ಇತರೆ ಅಂಶಗಳು.

ರಾಜ್ಯದಲ್ಲಿರುವ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಬರುವ ಕ್ಲಬ್‌ಗಳ ಕಾರ್ಯವೈಖರಿ ಮತ್ತು ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಸಮಗ್ರವಾಗಿ ಪರಿಶೀಲಿಸಿ ವರದಿ ಸಲ್ಲಿಸಲು ರಚಿಸಲಾದ ವಿಶೇಷ ಸದನ ಸಮಿತಿಯು ರಾಜ್ಯದಲ್ಲಿರುವ ಎಲ್ಲಾ ಕ್ಲಬ್‌ಗಳಲ್ಲಿಯೂ ಸದಸ್ಯತ್ವ ಹೊಂದುವ ಹಾಗೂ ವಸ್ತ್ರ ಸಂಹಿತೆ ಕುರಿತು ಏಕರೂಪತೆ ತರಲು ನಿಯಮಾವಳಿ ರೂಪಿಸುವುದು ಹಾಗೂ ವಿಧಾನ ಸಭೆಯಲ್ಲಿ ಮಾನ್ಯ ಸದಸ್ಯರಾದ

ಶ್ರೀ ಎನ್.ಎ. ಹ್ಯಾರಿಸ್ ಅವರ ಅಧ್ಯಕ್ಷತೆಯಲ್ಲಿ ರಚಿಸಲಾಗಿದ್ದ ಸಮಿತಿಯು ಮಾಡಿರುವ ಶಿಫಾರಸ್ಸುಗಳನ್ನು ಆಧರಿಸಿ ಉಭಯ ಸದನಗಳಲ್ಲಿ ವಿಧೇಯಕ ಮಂಡನೆಗೆ ಸಂಬಂಧಪಟ್ಟಂತೆ ಕಾರ್ಯನಿರ್ವಹಿಸಲು ವಿಧಾನ ಪರಿಷತ್ತಿನ ಮಾನ್ಯ ಶಾಸಕರಾದ ಡಾ: ಕೆ. ಗೋವಿಂದರಾಜು ಅವರ ಅಧ್ಯಕ್ಷತೆಯಲ್ಲಿ ಹಾಗೂ ಮಾನ್ಯ ಶಾಸಕರುಗಳಾದ

ಡಾ: ತೇಜಸ್ವಿನಿಗೌಡ ಮತ್ತು ಶ್ರೀ ಪ್ರಕಾಶ್ ಕೆ.ರಾಥೋಡರವರನ್ನು ಸದಸ್ಯರನ್ನಾಗಿ ನೇಮಿಸಿ ದಿನಾಂಕ:19.02.2021ರಂದು ಉಪ ಸಮಿತಿಗೆ ವಹಿಸಲಾಗಿರುತ್ತದೆ. (ಅನುಬಂಧ–2)

ಅದರಂತೆ, ಉಪ ಸಮಿತಿಯು ದಿನಾಂಕ:17.04.2021, 19.07.2021 ಮತ್ತು 12.10.2021ರಂದು ನಗರಾಭಿವೃದ್ಧಿ ಇಲಾಖೆ, ಕಂದಾಯ ಇಲಾಖೆ, ಸಹಕಾರ ಇಲಾಖೆ, ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳೊಂದಿಗೆ ಸಭೆ ನಡೆಸಿರುತ್ತದೆ. ಉಪ ಸಮಿತಿಯು ಎಲ್ಲಾ ಆಯಾಮಗಳಲ್ಲಿ ಕೂಲಂಕಷವಾಗಿ ಪರಿಶೀಲಿಸಿ ಅಧ್ಯಯನ ನಡೆಸಿ ಒಟ್ಟಾರೆಯಾಗಿ ತೀರ್ಮಾನಿಸಿದಂತೆ ರಾಜ್ಯದಲ್ಲಿರುವ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಬರುವ ಕ್ಲಬ್‌ಗಳ ಕಾರ್ಯವೈಖರಿ ಮತ್ತು ಚಟುವಟಿಕೆಗಳನ್ನು ಕಾನೂನು ಬದ್ಧವಾಗಿ ನಿಯಂತ್ರಿಸಲು THE KARNATAKA SOCIETIES REGISTRATION (AMENDMENT) BILL, 2024ಕ್ಕೆ ಸಂಬಂಧಿಸಿದಂತೆ ಕರಡನ್ನು ತಯಾರಿಸಿ ಉಪ ಸಮಿತಿಯು ತನ್ನ ವರದಿಯನ್ನು ದಿನಾಂಕ:29.05.2023ರಂದು ಸಲ್ಲಿಸಿರುತ್ತದೆ.

ವಿಶೇಷ ಸದನ ಸಮಿತಿಯು ದಿನಾಂಕ: 25 ರಿಂದ 27ನೇ ಆಕ್ಟೋಬರ್, 2023ರವರೆಗೆ ನವದೆಹಲಿಗೆ ಅಧ್ಯಯನ ಪ್ರವಾಸವನ್ನು ಕೈಗೊಂಡು ನವದೆಹಲಿಯಲ್ಲಿರುವ Constitution Club of India ಸಂಸ್ಥೆಗೆ ದಿನಾಂಕ: 26.10.2023ರಂದು ಭೇಟಿ ನೀಡಿ ಕ್ಲಬ್‌ನ ಆಡಳಿತ ಅಧಿಕಾರಿ ಶ್ರೀ ರಾಜೇಶ್ ಕುಮಾರ್ ಅವರೊಂದಿಗೆ ಸುದೀರ್ಘವಾಗಿ ಚರ್ಚಿಸಿತು. Constitution Club of Indiaನ ಕಾರ್ಯವೈಖರಿಯ ಬಗ್ಗೆ ಸಮಿತಿಯು ಮೆಚ್ಚುಗೆ ವ್ಯಕ್ತಪಡಿಸಿತು.

ದಿನಾಂಕ:27.10.2023ರಂದು ನವದೆಹಲಿಯಲ್ಲಿರುವ India Habitat Centreಗೆ ಭೇಟಿ ನೀಡಿ ಅಲ್ಲಿನ ಡೆಪ್ಯೂಟಿ ಡೈರೆಕ್ಟರ್ ಶ್ರೀ ಸಂದೀಪ್ ಕಪೂರ್ ಹಾಗೂ ಶ್ರೀ ರಾಜೀವ್ ಪುರಿ ಅವರೊಡನೆ ಚರ್ಚಿಸಿತು. ಸಮಿತಿಯು ಸಂಸ್ಥೆಯ ವಿವಿಧ ವಿಭಾಗಗಳಾದ, ಹ್ಯಾಬಿಟೇಟ್ ಲರ್ನಿಂಗ್ ಸೆಂಟರ್, ಹ್ಯಾಬಿಟೇಟ್ ಲೈಬ್ರರಿ ಅಂಡ್ ರಿಸೋರ್ಸ್ ಸೆಂಟರ್, ರೂಫ್ ಪ್ಯಾನಲ್ಸ್, ಓಲ್ಡ್ ವರ್ಲ್ಡ್ ಹಾಸ್ಪಿಟಾಲಿಟಿಗಳ ಕಾರ್ಯವೈಖರಿಯನ್ನು ವೀಕ್ಷಿಸಲಾಯಿತು.

ದುಬಾರಿ ಸದಸ್ಯತ್ವದ ಶುಲ್ಕದಿಂದಾಗಿ ಸಾಮಾನ್ಯ ಹಾಗೂ ಮಧ್ಯಮ ವರ್ಗದ ಜನರು ಕ್ಲಬ್‌ಗಳಿಗೆ ಹೋಗದಂತಹ ಪರಿಸ್ಥಿತಿ ನಿರ್ಮಾಣವಾಗಿದ್ದು, ಇದು ಕೇವಲ ಶ್ರೀಮಂತ ವರ್ಗದವರಿಗೆ ಮಾತ್ರವೇ ಸೀಮಿತವಾಗಿದೆ ಎನ್ನುವಂತಾಗಿದೆ. ಆದ್ದರಿಂದ, ಸಮಾಜದ ಎಲ್ಲ ಸ್ಥರದ ಜನರು ಸಹ ಕ್ಲಬ್‌ನ ಉಪಯೋಗವನ್ನು ಪಡೆಯುವಂತಾಗಬೇಕು ಹಾಗೂ ಆ ಮಾದರಿಯಲ್ಲಿಯೇ ಸದಸ್ಯತ್ವದ ಶುಲ್ಕವನ್ನು ನಿಗದಿಪಡಿಸಬೇಕು. ಕ್ಲಬ್‌ಗಳಲ್ಲಿ ರಾಯಲ್ ಲೈಬ್ರರಿ ಮಾಡಬೇಕು ಅಂದರೆ, ರಾಜ್ಯದ ವೈಭವದ ಪ್ರಾಚೀನತೆಯನ್ನು ಒಳಗೊಂಡಂತೆ ಲೈಬ್ರರಿ ಮಾಡಿ ಎಲ್ಲಾ ವರ್ಗದ ಜನರ ಉಪಯೋಗಕ್ಕೆ ದೊರೆಯುವಂತಾಗಬೇಕು.

ಪ್ರಸ್ತುತ ಕ್ಲಬ್‌ಗಳಿಗೆ ಸರ್ಕಾರದ ಜಮೀನುಗಳನ್ನು 50ರಿಂದ 100 ವರ್ಷಗಳವರೆಗೆ ಲೀಸ್‌ಗೆ ನೀಡಲಾಗುತ್ತಿದ್ದು, ಲೀಸ್‌ನ ಅವಧಿಯನ್ನು 50 ರಿಂದ 60 ವರ್ಷಗಳಿಗೆ ಸಿಮೀತಗೊಳಿಸಿ ಗುತ್ತಿಗೆಗೆ ನೀಡಬೇಕು. ಈ ಹಿಂದೆ ಲೀಸ್‌ನ ಮೊತ್ತವು ಕನಿಷ್ಠ ದರಕ್ಕೆ ನಿಗದಿಗೊಳಿಸಲಾಗಿದ್ದು ಪ್ರಸ್ತುತ ಸದರಿ ಕ್ಲಬ್‌ಗಳ ಲೈಸನ್ಸ್‌ಗಳ ನವೀಕರಣ ಮಾಡುವಾಗ ಲೀಸ್‌ನ ಮೊತ್ತವನ್ನು ಇಂದಿನ ಬೆಲೆಯ ಸೂಚ್ಯಂಕಕ್ಕೆ ಅನುಗುಣವಾಗಿ ಲೀಸ್ ದರ ಮತ್ತು ತೆರಿಗೆ ಮೊತ್ತವನ್ನು ಪರಿಷ್ಕರಿಸಿಕೊಳ್ಳುವುದು. ತೆರಿಗೆ ಮೊತ್ತವನ್ನು ಪಾವತಿಸದಿರುವ ಕ್ಲಬ್‌ಗಳ ಬಾರ್ ಲೈಸೆನ್ಸ್‌ಗಳನ್ನು ನವೀಕರಿಸದೇ ತೆರಿಗೆ ಪಾವತಿ ಮಾಡುವವರೆಗೆ ನವೀಕರಣ ಪ್ರಕ್ರಿಯೆಯನ್ನು ತಡೆಹಿಡಿಯುವುದು.

******

## ಸಮಿತಿಯ ಶಿಫಾರಸ್ಸುಗಳು

1. ರಾಜ್ಯದ ಯಾವುದೇ ಕ್ಲಬ್‌ಗಳು ನಮ್ಮ ಸಂಸ್ಕೃತಿ ಮತ್ತು ಪರಂಪರೆಯ ಸಾಂಪ್ರದಾಯಿಕ ವಸ್ತ್ರಗಳನ್ನು ನಿಷೇಧಿಸದೆ ಸಾಮಾನ್ಯ ನಾಗರೀಕ ಸಭ್ಯತೆಯಿಂದ ತೊಡುವ ಉಡುಗೆ ಧರಿಸಿ ಕ್ಲಬ್‌ಗಳಿಗೆ ಪ್ರವೇಶಿಸುವ ಅವಕಾಶ ಹೊಂದಿರುವಂತಹ ನಿಯಮಗಳನ್ನು ಅಳವಡಿಸಿಕೊಳ್ಳುವಂತೆ ಎಲ್ಲಾ ಕ್ಲಬ್‌ಗಳಿಗೆ ಕಟ್ಟುನಿಟ್ಟಿನ ಸೂಚನೆಯನ್ನು ನೀಡಬೇಕೆಂದು ಹಾಗೂ ವಿಧೇಯಕದಲ್ಲಿ ಅಳವಡಿಸಿಕೊಳ್ಳುವಂತೆ ಸಮಿತಿಯು ಶಿಫಾರಸ್ಸು ಮಾಡುತ್ತದೆ.

2. ಸದಸ್ಯತ್ವ ಶುಲ್ಕ ನಿಗಧಿಪಡಿಸುವುದಕ್ಕೆ ಸಂಬಂಧಿಸಿದಂತೆ ಎಲ್ಲಾ ಕ್ಲಬ್‌ಗಳಿಗೆ ಸರ್ಕಾರವು ಸೂಕ್ತ ಮಾನದಂಡ ಅಳವಡಿಸಬೇಕೆಂದು ಮತ್ತು ಸಕ್ಷಮ ಪ್ರಾಧಿಕಾರಿಯು ಪ್ರತಿಯೊಂದು ಕ್ಲಬ್‌ನ ಶುಲ್ಕವನ್ನು ನಿಗದಿಪಡಿಸುವಂತೆ ಸಮಿತಿಯು ಶಿಫಾರಸ್ಸು ಮಾಡುತ್ತದೆ.

3. ಸರ್ಕಾರದಿಂದ ವಿನಾಯಿತಿ ದರದಲ್ಲಿ ಜಮೀನು ಅಥವಾ ಇತರೆ ಸವಲತ್ತುಗಳನ್ನು ಪಡೆದಿರುವ ಕ್ಲಬ್‌ಗಳು ವಾರ್ಷಿಕ ಆದಾಯದ ಒಟ್ಟು ಮೊತ್ತದಲ್ಲಿ ಶೇ.5 ರಿಂದ 7ರಷ್ಟು ಮೊತ್ತವನ್ನು ಶುಲ್ಕದ ರೂಪದಲ್ಲಿ ಸರ್ಕಾರಕ್ಕೆ ಕಡ್ಡಾಯವಾಗಿ ಪಾವತಿಸಲು ಕಾಯ್ದೆಯಲ್ಲಿ ಅಳವಡಿಸಲು ಸಮಿತಿಯು ಶಿಫಾರಸ್ಸು ಮಾಡುತ್ತದೆ.

4. ಸರ್ಕಾರದಿಂದ ವಿನಾಯಿತಿ ದರದಲ್ಲಿ ಜಮೀನು ಅಥವಾ ಇತರೆ ಸವಲತ್ತು ಪಡೆದಿರುವ ಕ್ಲಬ್‌ಗಳಲ್ಲಿ ಆಯಾಯ ಕ್ಷೇತ್ರವಾರು ಜನಪ್ರತಿನಿಧಿಗಳು (ಸಂಸದರು, ಶಾಸಕರು ವಿಧಾನ ಪರಿಷತ್ತು/ವಿಧಾನ ಸಭೆ) ಸದಸ್ಯರಾಗ ಬಯಸಿದಲ್ಲಿ ಅಂತಹ ಜನಪ್ರತಿನಿಧಿಗಳಿಗೆ ಸದಸ್ಯತ್ವವನ್ನು (Membership) ಅವರುಗಳು ಬಯಸುವ ಎರಡು ಕ್ಲಬ್‌ಗಳಲ್ಲಿ ನೀಡಬೇಕೆಂದು ಸಮಿತಿಯ ಶಿಫಾರಸ್ಸು ಮಾಡುತ್ತದೆ.

5. ಕ್ರೀಡಾ ರಂಗದಲ್ಲಿ ಮಹೋನ್ನತ ಸಾಧನೆ ಮಾಡಿ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಪ್ರತಿಷ್ಠಿತ ಪ್ರಶಸ್ತಿಗಳನ್ನು ಪಡೆದ ಕ್ರೀಡಾಪಟುಗಳಿಗೆ ಹಾಗೂ ಶೌರ್ಯ ಪ್ರಶಸ್ತಿಯನ್ನು ಪಡೆದ ಮಾಜಿ ಸೈನಿಕರಿಗೆ ಆಯಾ ಪ್ರದೇಶಗಳಲ್ಲಿರುವ ಸರ್ಕಾರದಿಂದ ವಿನಾಯಿತಿ ದರದಲ್ಲಿ ಜಮೀನು ಅಥವಾ ಇತರೆ ಸವಲತ್ತು ಪಡೆದಿರುವ ಯಾವುದಾದರೂ ಒಂದು ಕ್ಲಬ್‌ನ ಸದಸ್ಯರನ್ನಾಗಿ ನೇಮಕ ಮಾಡಿಕೊಳ್ಳುವ ಬಗ್ಗೆ ಕಾಯ್ದೆಯಲ್ಲಿ ಅವಕಾಶ ಕಲ್ಪಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.

6. ರಾಜ್ಯದಲ್ಲಿರುವ ಕ್ಲಬ್‌ಗಳು ಸರ್ಕಾರಿ ಆಸ್ಪತ್ರೆ ಹಾಗೂ 2 ರಿಂದ 10 ಸರ್ಕಾರಿ ಶಾಲೆಗಳವರೆಗೆ ದತ್ತು ತೆಗೆದುಕೊಂಡು ಅವಶ್ಯವಿರುವ ಎಲ್ಲಾ ಮೂಲ ಸೌಕರ್ಯಗಳನ್ನು(ಕಟ್ಟಡ ಮತ್ತು ಶೈಕ್ಷಣಿಕ ಸಾಮಾಗ್ರಿಗಳು) ಕಲ್ಪಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.

7. ರಾಜ್ಯದಲ್ಲಿರುವ ಎಲ್ಲಾ ಕ್ಲಬ್‌ಗಳು ಕಡ್ಡಾಯವಾಗಿ ಮೂಲಭೂತ ಸೌಲಭ್ಯಗಳನ್ನು ಹೊಂದಿರಬೇಕೆಂದು ಹಾಗೂ ಇನ್ನೂ ಮುಂದೆ ಕ್ಲಬ್‌ಗಳು ಅಗತ್ಯ ಮೂಲಭೂತ ಸೌಲಭ್ಯಗಳನ್ನು ಹೊಂದಿದ್ದರೆ ಮಾತ್ರ ಪರವಾನಗಿ ನೀಡಲು ಅಥವಾ ನವೀಕರಿಸಲು ಕ್ರಮಕೈಗೊಳ್ಳಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.

8. ಸರ್ಕಾರದಿಂದ ಕ್ಲಬ್‌ಗಳಿಗೆ ಮಂಜೂರು ಮಾಡಲಾದ ಒಟ್ಟು ಜಾಗವನ್ನು ಸುನಿಶ್ಚಿತಗೊಳಿಸಿ, ಕ್ಲಬ್‌ಗಳು ಸರ್ಕಾರಿ ಜಾಗವನ್ನು ಒತ್ತುವರಿ ಮಾಡಿದ್ದಲ್ಲಿ ಅಥವಾ ಕ್ಲಬ್‌ಗಳ ಜಾಗವನ್ನು ಬೇರಯವರು ಒತ್ತುವರಿ ಮಾಡಿದ್ದಲ್ಲಿ ಅದನ್ನು ತೆರವುಗೊಳಿಸಿ ಕ್ಲಬ್‌ನವರಿಗೆ ನೀಡಲು ಕ್ರಮವಹಿಸಬೇಕೆಂದು ಹಾಗೂ ಕ್ಲಬ್‌ಗಳಲ್ಲಿ ಉತ್ಪಾದನೆಯಾಗುವ ತ್ಯಾಜ್ಯವನ್ನು ವಿಲೇವಾರಿ ಮಾಡಲು ತ್ಯಾಜ್ಯ ಘಟಕಗಳ ನಿರ್ಮಾಣ ಹಾಗೂ ಮಳೆ ನೀರನ್ನು ಸಂಗ್ರಹಿಸಿ ಪುನರ್ ಬಳಕೆ ಮತ್ತು ಸೌರಶಕ್ತಿ ಉತ್ಪಾದನೆಗೆ ಘಟಕಗಳನ್ನು ಅಳವಡಿಸಿಕೊಳ್ಳಲು ಸರ್ಕಾರದಿಂದ ರೂಪಿಸಿರುವ ನಿಯಮಗಳನ್ನು ಚಾಚುತಪ್ಪದೇ ಪಾಲಿಸುವಂತೆ ಕಡ್ಡಾಯಗೊಳಿಸಲು ಸಮಿತಿಯು ಶಿಫಾರಸ್ಸು ಮಾಡುತ್ತದೆ.

9. ಪಾರಂಪರಿಕ ಕಟ್ಟಡವಿದ್ದರೂ ಸಹ ಬೌರಿಂಗ್ ಕ್ಲಬ್‌ನವರು ಕಾನೂನು ಬಾಹಿರವಾಗಿ ಅನಧಿಕೃತ ಕಟ್ಟಡ ನಿರ್ಮಾಣ ಕಾಮಗಾರಿಗಳನ್ನು ಮಾಡುವ ಮೂಲಕ ಕಾನೂನನ್ನು ಉಲ್ಲಂಘಿಸಿದ್ದು, ಇವರ ವಿರುದ್ಧ ಸೂಕ್ತ ಕ್ರಮ ಜರುಗಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.

10. ವಿಶೇಷ ಸದನ ಸಮಿತಿಯು ದಿನಾಂಕ: 22.09.2023ರಂದು ಬೆಂಗಳೂರಿನ ಜಯನಗರದಲ್ಲಿರುವ ಕಾಸ್ಮೋಪಾಲಿಟನ್ ಕ್ಲಬ್‌ಗೆ ಭೇಟಿ ನೀಡಿ ಸ್ಥಳ ಪರಿಶೀಲನೆ ಹಾಗೂ ಕ್ಲಬ್‌ನ ಅಧ್ಯಕ್ಷರು ಹಾಗೂ ಪದಾಧಿಕಾರಿಗಳೊಡನೆ ಸಭೆ ನಡೆಸಿದ ಸಂದರ್ಭದಲ್ಲಿ ಕ್ಲಬ್ ಅಧ್ಯಕ್ಷರಾದ ಶ್ರೀ ಎ.ಎನ್.ಕೆ. ರಾಜು ಅವರು ಕ್ಲಬ್‌ಗೆ ವಾಣಿಜ್ಯ ಮಳಿಗೆಗಳಿಂದ ಮಾಸಿಕ ಬರುತ್ತಿರುವ 18 ಲಕ್ಷ ರೂಪಾಯಿಗಳನ್ನು ಸರ್ಕಾರ ಪೂರ್ತಿಯಾಗಿ ತೆಗೆದುಕೊಳ್ಳಲೆಂದು ತಿಳಿಸಿರುತ್ತಾರೆ. ಕಾಸ್ಮೋಪಾಲಿಟನ್ ಕ್ಲಬ್‌ಗೆ ಬರುತ್ತಿರುವ ಒಟ್ಟು ಆದಾಯದ ಮೊತ್ತದಲ್ಲಿ ಶೇಕಡಾ 25ರಷ್ಟನ್ನು ಸೇವಾ ಚಟುವಟಿಕೆಗಳಿಗೆ ಬಳಸಿಕೊಳ್ಳಲು ಅನುಮತಿಸಿ ಉಳಿದ ಮೊತ್ತವನ್ನು ಸರ್ಕಾರಕ್ಕೆ ಪಡೆದುಕೊಳ್ಳಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಮುಂದಿನ ಅಗತ್ಯ ಕ್ರಮಕೈಗೊಳ್ಳಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.

11. ಬೆಂಗಳೂರು ಟರ್ಫ್ ಕ್ಲಬ್‌ನ ಜಾಗವನ್ನು ಲೋಕೋಪಯೋಗಿ ಇಲಾಖೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಹಾಗೂ ಟರ್ಫ್ ಕ್ಲಬ್‌ನವರು ಜಂಟಿ ಸರ್ವೆ ಮಾಡಿ ಸಮಿತಿಗೆ ನೀಡಿರುವ ವರದಿಯ ಆಧಾರದ ಮೇಲೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯವರು ತೆರಿಗೆ ಮೊತ್ತವನ್ನು ಲೆಕ್ಕಾಚಾರ ಮಾಡಿ ಪಾಲಿಕೆಗೆ ಬರಬೇಕಾಗಿರುವ ತೆರಿಗೆಯನ್ನು ಕೂಡಲೇ ವಸೂಲಿ ಮಾಡಲು ಕ್ರಮವಹಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ. (ಅನುಬಂಧ –3 ಜಂಟಿ ಸರ್ವೆ)

12. ಮೈಸೂರು ಮಹಾರಾಜರು ಕುದುರೆ ರೇಸ್ ಕ್ಲಬ್‌ನ್ನು ಕ್ರೀಡಾ ಮನೋಭಾವದಿಂದ ಸ್ಥಾಪಿಸಿದ್ದು, ಬೆಂಗಳೂರು ಟರ್ಫ್ ಕ್ಲಬ್ ಹಾಗೂ ಸ್ಯಾಂಕಿ ರಸ್ತೆಯಲ್ಲಿರುವ ಗಾಲ್ಫ್ ಕ್ಲಬ್‌ನ ಜಾಗವನ್ನು ಸರ್ಕಾರವು ಪ್ರಸ್ತುತ ವಶಪಡಿಸಿಕೊಂಡು ಅವರಿಗೆ ಪರ್ಯಾಯವಾಗಿ ಜಕ್ಕೂರು ಏರೋಡ್ರಮ್ ಹತ್ತಿರ ಅಥವಾ ಕುಣಿಗಲ್‌ನಲ್ಲಿ ಜಮೀನು ಮಂಜೂರು ಮಾಡುವ ಕುರಿತು ತಜ್ಞರ ಅಭಿಪ್ರಾಯ ಪಡೆದು ಸರ್ಕಾರವು ಅಂತಿಮ ತೀರ್ಮಾನ ಕೈಗೊಳ್ಳಬೇಕೆಂದು ಹಾಗೂ ಹಾಲಿ ಇರುವ ಗಾಲ್ಫ್ ಕ್ಲಬ್ ಜಾಗವನ್ನು ಹಸಿರು ಉದ್ಯಾನವನ್ನಾಗಿ ಪರಿವರ್ತಿಸಿ ವಾಕಿಂಗ್ ಪಾತ್‌ಗೆ ಅವಕಾಶ ಕಲ್ಪಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.

13. ವಿಧಾನಮಂಡಲದ ಉಭಯ ಸದನಗಳ ಹಾಲಿ ಮತ್ತು ಮಾಜಿ ಸದಸ್ಯರುಗಳ ಉಪಯೋಗಕ್ಕಾಗಿ ಸ್ಥಾಪಿಸಲಾಗಿರುವ ಸಾಂವಿಧಾನಿಕ ಕ್ಲಬ್ (Constitutional Club) ಜರೂರಾಗಿ ಕಾರ್ಯನಿರ್ವಹಿಸುವುದಕ್ಕಾಗಿ ಈಗಾಗಲೇ ಸರ್ಕಾರವು ಮಂಜೂರು ಮಾಡಿರುವ "ಬಾಲಬ್ರೂಯಿ" ಅತಿಥಿ ಗೃಹದ ಜಾಗದಲ್ಲಿ ತುರ್ತಾಗಿ ಎಲ್ಲಾ ಅಗತ್ಯ ಕ್ರಮಗಳನ್ನು ವಹಿಸಿ, ಪ್ರಸ್ತುತ ವರ್ಷದಿಂದಲೇ ಕಾರ್ಯರಂಭ ಮಾಡುವಂತೆ ಕ್ರಮ ಕೈಗೊಳ್ಳಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.

14. ಕರ್ನಾಟಕ ಸಾಂವಿಧಾನಿಕ ಕ್ಲಬ್ (Constitution Club of Karnataka) ಅನ್ನು ಸ್ಥಾಪಿಸಿದ ನಂತರ ಭಾರತ ಸಾಂವಿಧಾನಿಕ ಕ್ಲಬ್ (Constitution Club of India) ನೊಂದಿಗೆ ಒಡಂಬಡಿಕೆ ಮಾಡಿಕೊಳ್ಳುವುದು ಹಾಗೂ ಈ ಕ್ಲಬ್‌ನ್ನು ಭಾರತ ಸಾಂವಿಧಾನಿಕ ಕ್ಲಬ್‌ನ ಸಂಯೋಜನೆ ಪಡೆದು ಅದರ ಸಹಯೋಗದಲ್ಲಿ ನಡೆಸಲು ಸಮಿತಿಯು ಶಿಫಾರಸ್ಸು ಮಾಡುತ್ತದೆ.

15. ಹೊಸ ಬಡಾವಣೆ ನಿರ್ಮಾಣ ಮಾಡಲು ಅನುಮತಿ ನೀಡುವ ಸಂದರ್ಭದಲ್ಲಿಯೇ ಆ ಬಡಾವಣೆಯಲ್ಲಿ ಕ್ಲಬ್ ನಿರ್ಮಾಣ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಗೆ ಅನುಕೂಲವಾಗುವಂತೆ ಸ್ಥಳ ನಿಗದಿಪಡಿಸಲು ಸಮಿತಿಯು ಶಿಫಾರಸ್ಸು ಮಾಡುತ್ತದೆ.

16. ನೂತನವಾಗಿ ನಿರ್ಮಿಸಲಾಗುವ ಬಡಾವಣೆಗಳಲ್ಲಿ ಸರ್ಕಾರಿ ಮತ್ತು ಸರ್ಕಾರೇತರ ಸಂಸ್ಥೆಗಳಿಗೆ 25 ಎಕರೆಗಿಂತ ಮೇಲ್ಪಟ್ಟ ಜಮೀನು ಮಂಜೂರು ಮಾಡುವಾಗ ಆ ಬಡಾವಣೆಯ ನಿವಾಸಿಗಳಿಗೆ

ಅನುಕೂಲವಾಗುವಂತೆ ಕ್ಲಬ್‌ನ್ನು ಸ್ಥಾಪಿಸಲು ಸ್ಥಳಾವಕಾಶವನ್ನು ಮೀಸಲಿಡುವಂತೆ Karnataka Town and Country Planning Actನ್ನು ತಿದ್ದುಪಡಿ ಮಾಡುವಂತೆ ಸಮಿತಿಯು ಶಿಫಾರಸ್ಸು ಮಾಡುತ್ತದೆ.

17. ಪ್ರತಿಯೊಂದು ತಾಲ್ಲೂಕಿನಲ್ಲೂ ಕ್ಲಬ್ ನಿರ್ಮಿಸಲು ಸರ್ಕಾರದ ವತಿಯಿಂದ ಜಾಗ ನೀಡುವಂತೆ ಸಮಿತಿಯು ಶಿಫಾರಸ್ಸು ಮಾಡುತ್ತದೆ.

18. ಸಮಿತಿಯು ಅಧ್ಯಯನ ನಡೆಸಿ ಒಟ್ಟಾರೆಯಾಗಿ ತೀರ್ಮಾನಿಸಿದಂತೆ ರಾಜ್ಯದಲ್ಲಿನ ಕ್ಲಬ್‌ಗಳ ಕಾರ್ಯವೈಖರಿ ಮತ್ತು ಚಟುವಟಿಕೆಗಳನ್ನು ಕಾನೂನು ಬದ್ಧವಾಗಿ ನಿಯಂತ್ರಿಸಲು ವಿಧೇಯಕವೊಂದನ್ನು ಮುಂಬರುವ ಅಧಿವೇಶನದಲ್ಲಿ ಮಂಡಿಸಿ, ಸೂಕ್ತ ಕಾನೂನು ಜಾರಿಗೆ ತರಲು ಶಿಫಾರಸ್ಸು ಮಾಡುತ್ತದೆ.

19. ರಾಜ್ಯದಲ್ಲಿರುವ ಯಾವುದೇ ಕ್ಲಬ್‌ಗಳಿರಲಿ ಅವುಗಳೆಲ್ಲವೂ ಸರ್ಕಾರದ ಅಧಿನಿಯಮಗಳಿಗೆ ಒಳಪಡತಕ್ಕದ್ದು. ಅಲ್ಲದೆ ಅವುಗಳು ತಮ್ಮದೆ ಆದ ಸ್ವಂತ ನಿಯಮಗಳನ್ನು ಹೊಂದಲು ಆಸ್ಪದ ನೀಡಬಾರದು. ಇಲ್ಲದಿದ್ದಲ್ಲಿ ಅಂತಹ ಕ್ಲಬ್‌ಗಳಿಗೆ ಸರ್ಕಾರದ ವತಿಯಿಂದ ನೀಡಲಾಗುವ ನೀರು, ವಿದ್ಯುತ್ ಇತ್ಯಾದಿ ಸೌಲಭ್ಯಗಳನ್ನು ಹಾಗೂ ಅಬಕಾರಿ ಪರವಾನಗಿಯನ್ನು ರದ್ದುಗೊಳಿಸಬೇಕೆಂದು ಶಿಫಾರಸ್ಸು ಮಾಡುತ್ತದೆ. ರಾಜ್ಯದಲ್ಲಿರುವ ಎಲ್ಲಾ ಕ್ಲಬ್‌ಗಳಿಗೆ ಸಂಬಂಧಿಸಿದಂತೆ ಸಮಿತಿಯು ತಯಾರಿಸಿರುವ ಮಾದರಿ ಬೈಲಾವನ್ನು ಸರ್ಕಾರವು ಜಾರಿಗೊಳಿಸಬೇಕೆಂದು ಶಿಫಾರಸ್ಸು ಮಾಡುತ್ತದೆ. (ಅನುಬಂಧ–4)

20. ಪ್ರತಿಯೊಂದು ಕ್ಲಬ್‌ನಲ್ಲಿಯೂ ಕ್ಲಬ್‌ನ ಸದಸ್ಯರುಗಳಿಗೆ ಅನುಕೂಲವಾಗುವಂತೆ "ಹೆಲ್ತ್ ಕ್ಲಬ್" ವ್ಯವಸ್ಥೆ ಮಾಡುವಂತೆ ಸಮಿತಿಯು ಶಿಫಾರಸ್ಸು ಮಾಡುತ್ತದೆ.

21. ಬೆಂಗಳೂರಿನ "ಸೆಂಚುರಿ ಕ್ಲಬ್"ನ್ನು ಪಾರ್ಕ್ ಝೋನ್ (ಉದ್ಯಾನ ವಲಯ)ದಿಂದ ಮುಕ್ತಗೊಳಿಸಲು ಕರ್ನಾಟಕ ಸರ್ಕಾರಿ ಉದ್ಯಾನವನಗಳ (ಸಂರಕ್ಷಣೆ) ಅಧಿನಿಯಮ, 1975ಕ್ಕೆ ತಿದ್ದುಪಡಿಯನ್ನು ತರಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.

22. ವಿಶ್ವೇಶ್ವರಯ್ಯನವರ ಕನಸಿನಂತೆ ಅವರ ನಕ್ಷೆಯ ಪ್ರಕಾರ ಭವ್ಯವಾದ ಹೆರಿಟೇಜ್ ಕ್ಲಬ್‌ನ್ನು "ಸೆಂಚುರಿ ಕ್ಲಬ್"ನ ಜಾಗದಲ್ಲಿಯೇ ನಿರ್ಮಿಸಬೇಕೆಂದು ಹಾಗೂ "ಸೆಂಚುರಿ ಕ್ಲಬ್"ನ ಆವರಣದಲ್ಲಿ ಸರ್.ಎಂ.ವಿಶ್ವೇಶ್ವರಯ್ಯನವರ ಹಾಗೂ ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್ ರವರುಗಳ "ಮನುಷ್ಯ ಗಾತ್ರದ ಪ್ರತಿಮೆ"ಗಳನ್ನು ನಿರ್ಮಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.

23. ಸಮಿತಿಯು ಅಧ್ಯಯನ ನಡೆಸಿ ಒಟ್ಟಾರೆಯಾಗಿ ತೀರ್ಮಾನಿಸಿದಂತೆ ರಾಜ್ಯದಲ್ಲಿನ ಕ್ಲಬ್‌ಗಳ ಕಾರ್ಯವೈಖರಿ ಮತ್ತು ಚಟುವಟಿಕೆಗಳನ್ನು ಕಾನೂನು ಬದ್ದವಾಗಿ ನಿಯಂತ್ರಿಸಲು ಉಪ ಸಮಿತಿಯ ಶಿಫಾರಸ್ಸಿನ ರೀತ್ಯಾ, ಈ ಕೆಳಕಂಡಂತೆ ವಿಧೇಯಕವನ್ನು (ತಿದ್ದುಪಡಿ) ಮುಂಬರುವ ಅಧಿವೇಶನದಲ್ಲಿ ಮಂಡಿಸಿ, ಸೂಕ್ತ ಕಾನೂನನ್ನು ಜಾರಿಗೆ ತರಲು ಸಮಿತಿಯು ಶಿಫಾರಸ್ಸು ಮಾಡುತ್ತದೆ.

## THE KARNATAKA SOCIETIES REGISTRATION (AMENDMENT) BILL, 2024

A Bill further to amend the Karnataka Societies Registration Act, 1960.

Whereas, it is expedient further to amend the Karnataka Societies Registration Act, 1960 (Karnataka Act 17 of 1960) for the purposes hereinafter appearing.

Be it enacted by the Karnataka State Legislature in the seventy second year of the Republic of India, as follows:-

**1. Short title and commencement.-**(1) This Act may be called the Karnataka Societies Registration (Amendment) Act, 2024.

(2) It shall come into force on such date as the State Government may, by notification appoint.

**2. Amendment of the Preamble.-** For the Preamble of the

The Karnataka Societies Registration Act, 1960 (Karnataka Act No. 17 of 1960), (hereinafter referred to as the Principal Act), the following shall be substituted namely:-

"WHEREAS it is expedient to provide for the registration of literary, scientific, charitable, **Social Cultural,** other societies **and clubs** in the State of Karnataka;"

**3. Amendment to section 2.-**In section 2 of the Principal Act),- (i) for clause (a) the following shall be substituted, namely:-

"(a) **"Administrator"** means an officer appointed by the state Government under section 27A of the Act;"

(ii) after clause (a) so substituted, the following shall be inserted, namely:-

**"(a1) Byelaws**" means the byelaws registered or deemed to have been registered under this Act and includes Memorandum of Associations and Rules and Regulations existing on the date of commencement of this Act;

**"(a2)** "**Chief Executive**" means honorary / paid employee by whatever name called who discharges the duties, functions and responsibilities and day to day administration of the society and who is the custodian of the records, assets and liabilities of the society as provided in the Act, Rules and Bye laws;

**"(a3) "Committee"** means the executive committee **electedor administrator** appointed to whom the management of the affairs of a society is entrusted by its **bye laws;**

**“(a4) “Court”** means in the City of Bangalore, City Civil Court and elsewhere, the Principal Civil Court of **place of Registration** of Society;

**“(a5)** “**Honorary Member**” means a person appointed by the Government or managing committee of the society without payment of admission fee or annual subscription or any type of fees;

(iii) after clause (b), the following shall be inserted, namely:-

“(b1) “**Nominal Member**” means a person having business dealings or transaction with the society or utilizing the services of the society for a temporary period and has no right to vote in the election of office-bearers or to become an office-bearer or to attend any meetings convened by the society;

“(b2) **“Office Bearer**” means the President/ Chairperson, Vice President/ Vice Chairperson, Treasurer, Chief Executive by whatever name called or any other person among the managing committee to whom the powers and functions of the managing committee are entrusted with;

(iv) clause (d) shall be omitted;

(v) after clause (e), the following shall be inserted, namely:-

“(e-1) “Society” means an organization run by a group of persons or association of persons or other association of individuals including clubs, with the object of non-profit making providing sports, gymnasium, cultural, recreational and other service activities;

(e-2) “**State Government”** means the Government of Karnataka; ”

(vi) for clause (f) the following shall substituted namely:-

**“(f) ‘year’** means the year ending on the **31st day of March**”.

**4. Amendment to section 3.-** In section 3 of the Principal Act,-

(i) after clause (c), the following shall be inserted, namely:-

“(c1)Promotion of Social and Cultural activities;

(ii) after clause (g), the following shall be inserted, namely:-

“(h) Clubs providing sports, gymnasium, cultural, recreational and other service activities of entertainment”

**5. Amendment to section 4.-** For section 4 of the Principal Act, the following shall be substituted, namely:-

**“4. Conditions of registration**.- Every society carrying on activities mentioned under section 3 consisting of at least seven and more persons shall be registered within six months from date of commencement of the Karnataka Societies Registration (Amendment) Act, 2024:

Provided that, in case of a club consisting of fifty and more persons shall be registered within six months from the date of commencement of the Karnataka Societies Registration (Amendment) Act, 2024.

Provided further that, a society already registered under the Companies Act, 1956(Central Act 1 of 1956) or the Companies Act, 2013 (Central Act 18 of 2013) shall not be registered under this Act.

Provided also that, a society or club already registered under this Act before commencement of the Karnataka Societies Registration (Amendment) Act, 2024 need not be registered under this section."

**6. Amendment of section 6.-** For section 6 of the Principal Act, the following shall be substituted, namely:-

"**6.Requirements with respect to bye law.-**

The byelaws of a society shall provide for the following matters, namely:-

(i) Name, place, address and area of operation of the society;

(ii) Objectives of the society;

(iii) Activities that could be taken up by the society;

(iv) Admission, qualification and disqualification of members;

(v) Constitution of the committee and sub-committees and their terms of office;

(vi) Qualification and disqualification for the membership of the managing committee / directorship;

(vii) Duties, functions and responsibilities of the managing committee;

(viii) Procedure for the election of the members of the managing committee;

(ix) Procedure for the election of office-bearers;

(x) Powers, duties and responsibilities of the office-bearers;

(xi) Notice to convene the managing committee and sub-committee meetings, annual general meeting, special general meeting and other meetings;

(xii) Conduct of annual general meeting, special general meeting, committee and sub-committee meetings, procedure to be followed at such meetings including voting by the members;

(xiii) Recording the proceedings of the meetings of the General Body, Special General Body, Committee and sub-committee;

(xiv) Writing up and maintenance of books of accounts and records etc., preparation of financial statements and returns to be filed before the Registrar;

(xv) Custody of records, assets, liabilities and cash;

(xvi) Mobilization of resources for managing the society including admission fee, membership fee or annual subscription;

(xvii) Subsidiary organizations that could be formed by the society;

(xviii) Any other provisions relating to the achievement of the objectives of the society.

(2) There shall be registered with the bye law of the society, which shall contain provisions relating to admission of members, general meetings, proceedings at such meetings including voting by members, the committee and proceedings of meetings of the committee:

Provided that save as otherwise provided in this Act, no bye law of a society shall exclude any member from being entitled to vote.

(3) The bye law of the society shall be printed or typewritten, be divided into paragraphs numbered consecutively and be signed by each subscriber to the bye law (who shall add his address, description, age and occupation, if any) in the presence of at least one witness who shall attest the signature and shall likewise add his address, description and occupation.

(4) The Byelaws of a society shall be in kannada. If it is in English or any other language, a certified copy of the kannada version shall be filed within three months from the date of registration".

**7. Amendment of section 8.-** In section 8 of the Principal Act, after sub-section (2) the following shall be inserted, namely:-

"2(a) If the Registrar is unable to dispose of such application within the period of **Sixty days** in sub section (2) the society and its byelaws shall be deemed to have been registered."

**8. Insertion of new section 8A.-** After section 8 of the Principal Act, the following shall be inserted, namely:-

"**8A. Appointment of nominee by the Government.-** If the land has been transferred, leased, rented or granted or any other facility is given on concessional rate by the State Government to a club, one nominee of the concerned Department of the State Government shall also be a member of the Governing body of the club."

**9. Omission of section 9.-**Section of the Principal Act, the following shall be Omitted.

**10. Amendment of section 10.-**For section 10 of the Principal Act, the following shall be substituted, namely:-

"**10. Amendment of Byelaws**.-

(1) A society may, be a resolution passed in the annual general body or special general body meeting convened in the manner specified herein after, amend the provisions of its Byelaws, so far as may be required, to enable it to-

(a) alter extend or abridge such purpose of other purposes specified in section 3; or

(b) carry on the administration of the society more economically or more efficiently; or

(c) attain its main purpose by new or improved means.

(2) No amendment proposed under sub-section (1) shall be valid unless such proposal for amendment has been agreed to by two thirds of the members entitled and voting at a general meeting.

(3) Every proposal for approval of such amendment shall be forwarded to the Registrar within forty five days from the date of the general meeting along with such fee as may be specified. If the proposed amendment:

(i) is not contrary to the provisions of this Act and the Rules;

(ii) is not inconsistent with the principle of social justice;

Registrar may register the amendment within a period of **sixty days** from the date of receipt of the proposal.

(4) If the Registrar is unable to dispose of such application within the period specified in sub-section (3), the amendment of the byelaws shall be deemed to have been registered.

(5) No amendment of the Byelaws shall be valid unless such amendment has been registered or is deemed to have been registered under this Act.

(6) The Registrar shall forward to the society a copy of the registered amendment together with a certificate signed by him, and such certificate shall be conclusive evidence that the amendment has been duly registered or is deemed to have been registered.

(7) If the Registrar refuses to register the amendment of the byelaws under sub-section (3), any person aggrieved by such refusal may appeal to the

**Registrar of Co-operative Societies** in Karnataka to register the amendment.

Provided that such appeal shall be accompanied by such fee as may be specified by the "**Registrar of Co-operative Societies**.

**10(a ) Registered Office.** - Every registered society shall-

(1) have a registered office to which all communications and notices may be addressed and shall file with the Registrar notice of situation of such office and of any change thereof within such period as may be prescribed after the date of the registration of the society or after the date of change, as, the case may be ;

(2) Keep displayed on the outside of its registered office its name in a conspicuous position, in legible characters and, if the characters employed therefor are not those of Kannada, also in the characters of Kannada.

**10(b) Area of operation of the society.-**Society shall be registered whose area of operation for the purpose of admission of members is within the State of Karnataka. To open units outside the State, the society shall take prior permission from the **Registrar of Co-operative Societies** in Karnataka.

**10(c) Committee.-** (1) Every registered society shall have a committee of not less than **seven** members to manage its affairs.

(2) A copy of the register shall be filed either at the time of the registration of the society or within such period as may be prescribed from the appointment of the members of the first committee and the notice of any change among the members of the society or of the committee shall be filed within such period as may be prescribed from the date of such change.

(3) The members of the committee shall be appointed / elected at a meeting of the society by a resolution of a majority of the members present and entitled to vote thereat.

(4) The term of office of the members of the committee shall not exceed **five** years from the date of their appointment /election.

(5) The members of the committee shall be eligible for re-appointment.

(6) The chief Executive of the society or any staff of a society shall not have a right to contest in the election of the office bearers of the committee."

**11. Amendment of section 11.-** In section 11 of the Principal Act, for sub-section (3) the following shall be substituted, namely:-

"(3) A special general meeting may be convened at **any time on the direction of the registrar**, or on the requisition of not less than **one-third** of the number of members of the **committee,** or one-tenth of the total number of members of the society, entitled to vote who shall state in writing the business for which they wish the meeting to be convened and the **committee** shall, within ten days from the date of the receipt of the requisition, proceed duly to call a meeting for the consideration of the business stated on a day not later than forty days from the date of the receipt of the requisition.

**Quorum:- One tenth** of the total member for both Annual General body Meeting and Special General body Meeting quorum is required."

**12. Amendment of section 12.-**In section 12 of thePrincipal Act,-

(i) in sub-section (1) for the words "The governing body of every society registered under this Act shall keep at the registered office of the society or at such other place in the State as the governing body thinks fit, proper books of account with respect to,-"the words "The **Committee** of every society registered under this Act shall keep at the registered office of the **society proper books of account with respect** to,-" shall be substituted.

(ii) for sub-section (3) the following shall be substituted namely:-

"(3). Every society shall maintain accounts of all its branches / subsidiary institution along with main office."

**13. Amendment of section 13.-**For section13 of thePrincipal Act, the following shall be substituted namely:-

"13. **Balance sheet and annual list of Committee to be filed with Registrar.-** On or before the fourteenth day succeeding the day on which the annual general meeting of a society is held, there shall be filed with the Registrar a list of the names, addresses and occupations of the members of the **Committee** then entrusted with the management of the affairs of the society and a copy of the balance sheet and income and expenditure account **of the society and all its branches and allied institutions** audited by a person who under section 226 of the Companies Act, 1956 (Central Act 1 of 1956), can act as an auditor of companies registered in the State of Karnataka.

Provided further that, where a society has failed to file such records for a consecutive period of five years, **after obtaining prior permission of Registrar of Cooperative Societies can file the records for a period up to 10 years.**

**In case of society which has failed to submit records to the registrar for consecutive period of 10 years** the Registrar, may after giving a reasonable opportunity of being heard to the society, by an order cancel the registration of

such society and direct dissolution of the society, and thereupon the assets of the society shall be distributed, and the liabilities discharged in the same manner as if the society had been dissolved under section 22."

**14. Amendment of section 21.-**For section 21 of the Principal Act, the following shall be substituted namely:-

**"21. Amalgamation and division of registered societies. –**

(1) Any two or more registered societies may with the prior approval of the Registrar, by special resolution of both or all such registered societies, **become amalgamated** together as one society, with or without any dissolution or division of the funds of those registered societies or any of them.

